ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಸಿಬ್ಬಂದಿ-2/ಉ.ನೇ/ಹು.ಮುಂ/47/2013-14

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:15-09-2020.

## ಜ್ಞಾಪನ

**ವಿಷಯ:** 2020-21ನೇ ಸಾಲಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

**ಉಲ್ಲೇಖ:** 1.ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಯೋಜನೆ), ಇವರ ಪತ್ರ ಸಂಖ್ಯೆ:ಇಡಿ 86 ಯೋಯೋಕ 2013 ದಿನಾಂಕ:11-08-2014.

2. ಸರ್ಕಾರದ ಆದೇಶ ಸಂಖ್ಯೆ: ಆಇ 04 ಬಿಪಿಇ 2017, ದಿನಾಂಕ:01-02-2017.

*****

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಸಂಬಂಧ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಯೋಜನೇತರ ಅಡಿಯಲ್ಲಿ ಬರುವ ಎಲ್ಲಾ ಹುದ್ದೆಗಳು ಶಾಶ್ವತ ಹುದ್ದೆಗಳೆಂದು, ಯೋಜನೆಯಡಿ ಬರುವ ಹುದ್ದೆಗಳನ್ನು ತಾತ್ಕಾಲಿಕ ಹುದ್ದೆಗಳೆಂದು ಸ್ಪಷ್ಟೀಕರಿಸಿ ಅಂತಿಮ ಅಧಿಸೂಚನೆಯನ್ನು ದಿನಾಂಕ:29-05-2014ರ ಗೆಜೆಟ್‌ನಲ್ಲಿ ಪ್ರಕಟಿಸಿರುವುದರಿಂದ, ಸದರಿ ಹುದ್ದೆಗಳ ಮುಂದುವರಿಕೆಗೆ ಪ್ರತ್ಯೇಕವಾದ ಆದೇಶದ ಅವಶ್ಯಕತೆಯಿಲ್ಲವೆಂದು ಉಲ್ಲೇಖ-1ರ ಪತ್ರದಲ್ಲಿ ತಿಳಿಸಲಾಗಿದೆ.

ಆರ್ಥಿಕ ವರ್ಷ 2017-18ನೇ ಸಾಲಿನಿಂದ ಆಯ-ವ್ಯಯದಲ್ಲಿ ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ತೆಗೆದುಹಾಕಲಾಗಿದೆ ಎಂದು ಉಲ್ಲೇಖ-2ರಲ್ಲಿ ಆದೇಶಿಸಲಾಗಿದೆ. ಅದರಂತೆ, 2016-17ನೇ ಸಾಲಿನವರೆಗೆ ಪ್ರತ್ಯೇಕವಾಗಿ ಭರಿಸಲಾದ ವೆಚ್ಚಗಳನ್ನು ಒಂದೇ ಲೆಕ್ಕ ಶೀರ್ಷಿಕೆ (Budget-Line)ಯಡಿ ಭರಿಸಬಹುದಾಗಿದೆ.

ಆದ್ದರಿಂದ, ಮೇಲಿನ ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆ ಮತ್ತು ಯೋಜನೇತರ ಅಡಿ ಬರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ 2020-21ನೇ ಸಾಲಿಗೆ ವೇತನ ಬಿಡುಗಡೆ ಮಾಡಲು ತಿಳಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ರವರಿಗೆ:**
ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು.

<u>ಪ್ರತಿಯನ್ನು:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಖಜಾನಾಧಿಕಾರಿಗಳಿಗೆ.
3. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳಿಗೆ.
4. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಕಛೇರಿ ಪ್ರತಿ.